# ಕಂಬಾರರ ‘ಶಿವನ ಡಂಗುರ’ ಕಾದಂಬರಿಯಲ್ಲಿ ಆಧುನಿಕತೆ ಮತ್ತು ಗ್ರಾಮ ಸಮಾಜ

ಡಾ. ರಾಜೇಂದ್ರ

ಅತಿಥಿ ಉಪನ್ಯಾಸಕರು,

ಸರ್ಕಾರಿಪ್ರಥಮ ದರ್ಜೆ ಕಾಲೇಜು,

ಮರಿಯಮ್ಮನಹಳ್ಳಿ, ವಿಜಯನಗರ ಜಿಲ್ಲೆ

19ನೇ ಶತಮಾನದಲ್ಲಿ ಕೈಗಾರೀಕರಣದಿಂದಾಗಿ ಆಧುನೀಕರಣ ಉಂಟಾದಾಗ ಅದು ಕೇವಲ ನಗರ ಪ್ರದೇಶಗಳಲ್ಲಿ ಕಾಣಿಸಿಕೊಂಡಿತು. ಗ್ರಾಮಗಳು ತಮ್ಮ ಮೂಲ ಸ್ವರೂಪ, ದೇಸೀಯ ಸೊಗಡನ್ನು ಹಾಗೆ ಉಳಿಸಿಕೊಂಡಿದ್ದವು. ಆಧುನೀಕರಣದಿಂದ ಗ್ರಾಮದ ಅಂತಃಸತ್ವಕ್ಕೆ ಧಕ್ಕೆಯೇನೂ ಆಗಿರಲಿಲ್ಲ. ಆದರೆ ಆಧುನಿಕತೆಯು ಮುಂದುವರಿದಂತೆ ಗ್ರಾಮಗಳ ಸಂಸ್ಕೃತಿಯನ್ನೇ ಬುಡಮೇಲು ಮಾಡಿದೆ. ಕೇವಲ ಇಪ್ಪತ್ತು ವರ್ಷಗಳ ಹಿಂದಿನ ಗ್ರಾಮಗಳ ಸ್ಥಿತಿ ಇಂದು ಸಂಪೂರ್ಣ ಬದಲಾಗಿದೆ. ದೇಸೀಯತೆಯ ಮೂಲ ಸಂಸ್ಕೃತಿಯ ಸತ್ವವನ್ನು ಕಳೆದುಕೊಂಡಿದೆ. ಮನುಷ್ಯನ ಬದುಕಿನ ಪ್ರತಿಬಿಂಬವಾಗಿರುವ ಸಾಹಿತ್ಯ ಇದನ್ನು ತನ್ನೊಳಗೆ ದಾಖಲು ಮಾಡಿಕೊಂಡಿದೆ. 90 ರ ದಶಕದ ಕೃತಿಗಳಲ್ಲಿ ಚಿತ್ರಣಗೊಂಡ ಗ್ರಾಮ ಸಮಾಜದೊಂದಿಗೆ ಪ್ರಸ್ತುತ ಕಾಲಘಟ್ಟದಲ್ಲಿ ರಚಿತವಾದ ಕೃತಿಗಳಲ್ಲಿನ ಗ್ರಾಮ ಸಮಾಜವನ್ನು ಹೋಲಿಸಿ ನೋಡಿದರೆ ವ್ಯತಾಸ ತಿಳಿಯುತ್ತದೆ. ಚಂದ್ರಶೇಖರ ಕಂಬಾರರ ‘ಶಿವನ ಡಂಗುರ’ ಕಾದಂಬರಿ ಅಂತಹ ಕೃತಿಗಳಲ್ಲೊಂದು. ಸುಂದರ ಪರಿಸರದ ಹಳ್ಳಿಯೊಂದು ಆಧುನಿಕತೆಯ ದಾಳಿಗೆ ಸಿಲುಕಿ ನಲುಗುವ ಬಗೆ ವಾಸ್ತವ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಬದಲಾಗುತ್ತಿರುವ ಭಾರತದ ಗ್ರಾಮೀಣ ಸಮಾಜದ ಪ್ರತಿನಿಧಿಯಾಗಿ ‘ಶಿವಾಪುರ’ ಎಂಬ ಹಳ್ಳಿ ಇಲ್ಲಿ ಕಾಣಬಹುದು.

ಜಗತ್ತಿನ ಬಲಾಢ್ಯ ಶ್ರೀಮಂತ ರಾಷ್ಟ್ರಗಳು ತಮ್ಮ ಬಹುರಾಷ್ಟ್ರೀಯ ಕಂಪನಿಗಳನ್ನು ಭಾರತದಂಥ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಸ್ಥಾಪಿಸಿ ಇಲ್ಲಿಯ ನೆಲ, ಜಲ, ಗಾಳಿಯನ್ನು ವಿಷಕಾರಿಯನ್ನಾಗಿ ಮಾಡುತ್ತಿವೆ. ಅಣು ಸ್ಥಾವರದಂತಹ ಘಟಕಗಳು ಹೊರಹಾಕುವ ಅಪಾಯಕಾರಿ ಘನ ತ್ಯಾಜ್ಯ ಪರಿಸರಕ್ಕೆ ಅತ್ಯಂತ ಮಾರಕವಾದದ್ದು. ಇದನ್ನು ನೀರಿನಲ್ಲಿ, ಅಥವಾ ಬಯಲಿನಲ್ಲಿ ಬಿಸಾಕುವಂತಿಲ್ಲ. ಒಂದು ವೇಳೆ ಬಿಸಾಕಿದರೆ ಅಪಾರವಾದ ಸಾವು, ನೋವುಗಳು, ರೋಗಗಳು ಅಂಗವೈಕಲ್ಯ ಇತ್ಯಾದಿ ಕಾಣಿಸಿಕೊಳ್ಳುತ್ತದೆ. ಸಾವಿರ ವರ್ಷವಾದರೂ ಈ ತ್ಯಾಜ್ಯ ಇದು ಭೂಮಿಯಲ್ಲಿ ಕೊಳೆತು ಹೋಗುವುದಿಲ್ಲ. ಸಾಮಾನ್ಯವಾಗಿ ಇಂಥ ತ್ಯಾಜ್ಯವನ್ನು ಸೀಲ್ ಮಾಡಿದ ದೊಡ್ಡ ಡಬ್ಬಿಗಳಲ್ಲಿ ತುಂಬಿ ಭೂಮಿಯ ಆಳದಲ್ಲಿ ಹೂಳಲಾಗುತ್ತದೆ. ಇಂಥ ಪ್ರದೇಶಗಳಲ್ಲಿ ಮನುಷ್ಯರ ಪ್ರವೇಶಕ್ಕೆ ನಿರ್ಬಂಧವಿರುತ್ತದೆ. ಭೂಮಿಯ ಆಳದಲ್ಲಿ ತ್ಯಾಜ್ಯವನ್ನು ಹೂಳಿದ್ದರೂ ಅದರ ಪ್ರಭಾವ ಅಲ್ಲಿನ ಪರಿಸರದ ಮೇಲೆ ಉಂಟಾಗಿರುತ್ತದೆ. ಇಲ್ಲಿ ಬೆಳೆದ ಗಿಡ ಮರಗಳಲ್ಲಿ ವಿಷಕಾರಿ ಅಂಶ ಸಹಜವಾಗಿಯೇ ಸೇರಿಕೊಳ್ಳುತ್ತದೆ. ಅಣು ತ್ಯಾಜ್ಯ ಎಂಬುದು ಸೆರಗಿನಲ್ಲಿ ಕಟ್ಟಿಕೊಂಡ ಕೆಂಡದ ಹಾಗೆ. ಅದು ಭೂಮಿಯಲ್ಲಿ ಕೊಳೆಯುವುದಿಲ್ಲ, ನೀರಿನಲ್ಲಿ ಕರಗುವುದಿಲ್ಲ ಗಾಳಿಯಲ್ಲಿ ಸೇರುವುದಿಲ್ಲ. ಮನುಷ್ಯನನ್ನೊಳಗೊಂಡಂತೆ ಸಕಲ ಜೀವಿಗಳು, ಸಸ್ಯ ಸಂಪತ್ತು, ಪರಿಸರದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ. ಭಾರತದಲ್ಲಿ ಈ ಬಗೆಯ ತ್ಯಾಜ್ಯವನ್ನು ಅನೇಕ ಪ್ರದೇಶಗಳಲ್ಲಿ ಹೂಳಲಾಗಿದೆ. ಆಧುನಿಕತೆಯ ಕೆಡುಕಿನ ಭಾಗವಾಗಿರುವ ಈ ತ್ಯಾಜ್ಯ ಉತ್ಪಾದನೆಯನ್ನು ಅನೇಕ ಶ್ರೀಮಂತ ರಾಷ್ಟ್ರಗಳು ‘ನವ ವಸಾಹತುಶಾಹಿ’ ಮೂಲಕ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ತಂದು ಸುರಿಯುತ್ತಿವೆ. ಆಳುವ

ಪ್ರಭುತ್ವಗಳು ಇದನ್ನು ಒಪ್ಪಿಕೊಂಡಿವೆ. ಈ ಮೂಲಕ ಗ್ರಾಮ ಸಮಾಜದ ಅಂತಃಸತ್ವ ಹಾಳಾಗುತ್ತಿದೆ ಎನ್ನುವುದನ್ನು 'ಚಂದ್ರಶೇಖರ ಕಂಬಾರ'ರ 'ಶಿವನ ಡಂಗುರ' ಕಾದಂಬರಿ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

'ಶಿವಾಪುರ'ದ ಊರಗೌಡ ಬರಮೇಗೌಡ ಸ್ತ್ರೀಲೋಲನಾದರೂ ತನ್ನ ಊರಿಗಾಗಿ ಮಿಡಿಯುವವನು. ಊರಿನ ರೈತರಿಗೆ ಬೀಜವಿಲ್ಲದ ಬೆಳೆಗಳನ್ನು ಪರಿಚಯಿಸಿ ಹಣ ಗಳಿಕೆಯ ದಾರಿ ತಿಳಿಸುವ ಮೂಲಕ ಆಧುನೀಕತೆಯನ್ನು ತರುತ್ತಾನೆ. ಶಿವಾಪುರ ಅಭಿವೃದ್ಧಿಗೊಂಡು ಆಧುನೀಕರಣಗೊಳ್ಳಲು ಇಂಗ್ಲಿಷ್ ಶಾಲೆ, ಆಸ್ಪತ್ರೆಗಳನ್ನು ಆರಂಭಿಸಬೇಕೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸುತ್ತಾನೆ. ಅವನ ಮನವಿಗೆ ಸ್ಪಂದಿಸಿದ ಡಿ.ಸಿ. ಅಮೆರಿಕಾದ ಚಾರಿಟಿ ಸಂಸ್ಥೆಯಿಂದ ನೆರವು ಕೊಡಿಸುವುದಾಗಿ ಹೇಳುತ್ತಾನೆ. ಬರಮೇಗೌಡ ಶಿವಾಪುರಕ್ಕೆ ಆಧುನೀಕತೆ ತರಲು ಬಯಸಿದರೆ ಅವನ ಅಳಿಯ ಕುಂಟಿರಪ ಅಮೆರಿಕಾದ 'ಜಾಕ್ಸನ್ ಕಂಪನಿ'ಯ ಮೂಲಕ ಜಾಗತೀಕರಣವನ್ನೇ ತರುತ್ತಾನೆ. ಅದರ ಪರಿಣಾಮಗಳು ಹಾಗೂ ಜಾಗತೀಕರಣಕ್ಕೆ ದೇಸಿ ಒಡ್ಡುವ ಪ್ರತಿರೋಧವೇ 'ಶಿವನ ಡಂಗುರ' ಕಾದಂಬರಿಯ ವಸ್ತು. ಬರಮೇಗೌಡನ ಶಾಲೆ, ಆಸ್ಪತ್ರೆ ಯೋಜನೆಗೆ ಶಿವಾಪುರದ ಫಲವತ್ತಾದ 'ಮಲ್ಲಿಮಡು' ಸ್ಥಳವನ್ನು ಆಯ್ದುಕೊಳ್ಳಲಾಗುತ್ತದೆ. 'ಶಿವಾಪುರದ ಸಮಗ್ರ ಅಭಿವೃದ್ಧಿ' ಎಂಬ ಹೆಸರಿನೊಂದಿಗೆ ಕಾರ್ಯ ಆರಂಭಿಸುವ ಜಾಕ್ಸನ್ ಕಂಪನಿಯ ಪ್ರತಿನಿಧಿಯಾಗಿ ಬಿಗ್‌ಬಾಸ್ ಹಾಗೂ ತಾರಾ ಕುಂಟಿರಪನ ಸಹಾಯದೊಂದಿಗೆ ಜಾಗತೀಕರಣ ಕೆಡುಕಿನ ಭಾಗವಾಗಿ ಶಿವಾಪುರ ಪ್ರವೇಶಿಸುತ್ತಾರೆ. ಯೋಜನೆಯಲ್ಲಿ ಇಂಗ್ಲಿಷ್ ಸ್ಕೂಲು, ಪ್ರೌಢಶಾಲೆ, ಕಾಲೇಜು ಸ್ಥಾಪನೆ ಮಾಡುವುದು ಎಂದಿದ್ದರೂ ಅದು ಕೇವಲ ನೆಪ ಮಾತ್ರ. ಸಮೃದ್ಧವಾಗಿ ಹಸಿರು ತುಂಬಿಕೊಂಡು, ನೀರಿನ ತೊರೆ ಹರಿಯುತ್ತಿದ್ದ ಮಲ್ಲಿಮಡುವನ್ನು ಜಾಕ್ಸನ್ ಕಂಪನಿ ಆಯ್ಕೆ ಮಾಡಿಕೊಳ್ಳುತ್ತದೆ. ಮಲ್ಲಿ ಮಡುವಿನ ತಗ್ಗು ಪ್ರದೇಶವನ್ನು ಸಮತಟ್ಟು ಮಾಡಲು ವಿದೇಶಿ ಕಾರ್ಖಾನೆಯ ವಿಷಕಾರಿ ತ್ಯಾಜ್ಯವನ್ನು ತುಂಬಲಾರಂಭಿಸುತ್ತದೆ. ಪರಿಣಾಮ ಇಡೀ ಶಿವಾಪುರ ತತ್ತರಿಸುತ್ತದೆ. ಗರ್ಭ ಧರಿಸಿದ ದನಗಳಿಗೆ ಗರ್ಭಪಾತವಾಗುತ್ತದೆ. ವಿಕಾರ ರೂಪದ ಕರುಗಳು, ಶಿಶುಗಳ ಜನನವಾಗುತ್ತದೆ. ನಿಧಾನವಾಗಿ ನೆಲ ಬಂಜರಾಗುತ್ತಾ ಇಡೀ ಶಿವಾಪುರವನ್ನು ಕೆಟ್ಟ ವಾಸನೆ ಆವರಿಸುತ್ತದೆ. ಮಲ್ಲಿಮಡುವಿನಲ್ಲಿ ಬೆಳೆದ ನೇರಳೆ ಮರಗಳು ಒಂದೆರಡು ವರ್ಷದ ಹಿಂದೆ ರುಚಿಕರವಾದ ಹಣ್ಣನ್ನು ನೀಡುತ್ತಿದ್ದದ್ದು ಬದಲಾಗಿ ರಸವಿಲ್ಲದ ರುಚಿ ಹೀನ ಬಾಡಿದ ಹಣ್ಣುಗಳನ್ನು ಬಿಡತೊಡಗುತ್ತವೆ. ಅಭಿವೃದ್ಧಿ ಹೆಸರಿನಲ್ಲಿ ಜಾಗತೀಕರಣದ ದಾಳಿಗೆ ಸಿಕ್ಕು ಅನೇಕ ಹಳ್ಳಿಗಳು ಇಂದು ಹೀಗೆ ವಿನಾಶ ಹೊಂದುತ್ತಿವೆ.

ಆಧುನೀಕತೆಯು ಶಿವಾಪುರದ ಕೃಷಿಯ ಮೇಲೂ ಆಕ್ರಮಣ ಮಾಡುತ್ತದೆ. ಇಲ್ಲಿಯ ರೈತರು ತಾವು ಬೆಳೆದ ಧಾನ್ಯಗಳು ತರಕಾರಿಗಳನ್ನು ಸ್ವತಃ ತಾವು ತಿನ್ನುವುದಿಲ್ಲ. ಯಾಕೆಂದರೆ ತರಕಾರಿ ಧಾನ್ಯದಲ್ಲಿ ರಸಗೊಬ್ಬರದ ವಾಸನೆಯು ದಟ್ಟವಾಗಿರುತ್ತದೆ. ಮಲ್ಲಿಮಡುವಿನ ವಿಷದ ಪ್ರಭಾವ ರೈತರ ಬೆಳೆಗೂ ಆವರಿಸುತ್ತವೆ. ಆದರೆ ತಾವು ತಿನ್ನಲಾರದಂತಹ ತರಕಾರಿ, ಧಾನ್ಯಗಳನ್ನು ಮಾರಬಾರದು ಎಂಬ ವಿವೇಕವೂ ಅವರಲ್ಲಿ ಉಳಿಯುವುದಿಲ್ಲ. ಅವರು ಮಾತ್ರ ಬೇರೆ ಹಳ್ಳಿಗಳಲ್ಲಿ ಬೆಳೆದ ಧಾನ್ಯ ತರಕಾರಿಗಳನ್ನು ಉಪಯೋಗಿಸುತ್ತಾರೆ. ಅಲ್ಲದೇ ರೈತರು ತಮಗೆ ಅಗತ್ಯವಿದ್ದ ಬೆಳೆಗಳನ್ನು ಬೆಳೆಯದೇ ಹಣ ಸುರಿಸುವ ವಾಣಿಜ್ಯ ಬೆಳೆ ಕಬ್ಬನ್ನು ಬೆಳೆಯಲು ಆರಂಭಿಸುತ್ತಾರೆ. ಕಬ್ಬಿಗೆ ವರ್ಷವಿಡೀ ನೀರು ಬೇಕಾಗಿದ್ದರಿಂದ ಮಳೆ ಕಡಿಮೆಯಾಗಿ ಹೊಳೆ ನೀರು ಸಾಕಾಗದಿದ್ದಾಗ ಸಾಲ ಮಾಡಿ ಕೊಳವೆ ಬಾವಿ ಹಾಕಿಸುತ್ತಾರೆ. ರಾಸಾಯನಿಕ ಗೊಬ್ಬರ ಕೀಟನಾಶಕ ಸಿಂಪಡಿಸಿ ಒಳ್ಳೆಯ ಫಸಲು ತೆಗೆದು, ಹಣ ಗಳಿಸಿ ಹಣ ಗಳಿಕೆಯ ಹಿಂದೆ ಬೀಳುತ್ತಾರೆ ಇದರೊಂದಿಗೆ ಜಾಕ್ಸನ್ ಕಂಪನಿಯ ಪರಿಸರ ಮಾಲಿನ್ಯದೊಂದಿಗೆ ಪರೋಕ್ಷವಾಗಿ ತಾವೂ ಕೈಜೋಡಿಸುತ್ತಾರೆ. ಅಂದು ಹಸಿರು ಕ್ರಾಂತಿಯಿಂದ ಉಂಟಾದ ಪರಿಸರ ಅಸಮತೋಲನದಿಂದಾಗಿ ಇಂದು ದೇಸಿ ಕೃಷಿಯಲ್ಲಿ ಸಹಜವಾಗಿಯೇ ಇದ್ದ ಕ್ರಿಮಿ, ಕೀಟಗಳ ವ್ಯವಸ್ಥೆ ನಾಶವಾಗಿವೆ. ರೈತ ಅನಿವಾರ್ಯವಾಗಿ ದುಬಾರಿ ಬೆಲೆ

ತೆತ್ತು ತನ್ನ ಕೃಷಿ ಪದ್ಧತಿಯನ್ನು ಕಂಪನಿಗಳಿಂದಲೇ ಕೀಟನಾಶಕಗಳನ್ನು ಕೊಳ್ಳುವಂತಾಗಿದೆ. ಹೀಗಾಗಿ ಕಳೆದ ಮೂರು ದಶಕಗಳಲ್ಲಿ ಉತ್ಪಾದನೆ ಹೆಚ್ಚಾಗುತ್ತಿದ್ದರೂ ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೇ ರೈತ ಆತ್ಮಹತ್ಯೆಯತ್ತ ಮುಖ ಮಾಡಿದ್ದಾನೆ.

ಕಾದಂಬರಿಯ ಪ್ರಮುಖ ಪಾತ್ರವಾದ 'ಜೋಗತಿ ತಾರವ್ವ' ಹೇಳುವ "*ಇವಕ್ಕೆಲ್ಲಾ ರೊಕ್ಕದ ಹಪಾಪಿ ಹತ್ತೇತಿ, ಉಣ್ಣಾ ಅನ್ನಾ, ಬಿಟ್ಟು, ಕಬ್ಬಿಗ ಗಂಟ ಬಿದ್ದಾವು. ರೊಕ್ಕದ ಬೆಳಿ ಅಂತ ಇದ್ದ ಬಿದ್ದ ಹೊಲ ಎಲ್ಲಾ ಇವರ ಕಬ್ಬಿಗಿ ಸಾಲವೊಲ್ಲು. ರಸಗೊಬ್ಬರ ಸಾಲುವೊಲ್ದು. ಸಾಲ ತಂದ ತಂದ ಹೊಲದಾದ ಸುರುವಾಕ ಹತ್ಯಾರು. ಸಾಲ ತೀರವೊಲ್ದು ಬಂಡಿ ತುಂಬ ಟೊಮ್ಯಾಟೊ ಹಣ್ಣ ತಗೊಂಡ್ಹೋಗಿ ರೇಟ ಬರಲಿಲ್ಲಂತ ರಸ್ತಾದಾಗ ಸುರಿವಿಬಂದರು. ಇವರಿಗಿ ಇನ್ನೂ ಬುದ್ದಿ ಬಂದಿಲ್ಲಂದರ. ಕುಡಿದೇವಂದರ ನಮ್ಮ ಊರ ಹೊಳೀ ನೀರ ನಮಗ ಇಲ್ಲ. ಬೆಳದ ಬೆಳೀ ನಮ್ಮದಲ್ಲ. ಇವರ ಬೆಳೆದ ಬೆಳಿಗಿ ಯಾರೋ ದರಾ ಕಟ್ಟವರಂತ, ಯಾರೋ ಕೊಳ್ಳವರಂತ. ಅವರು ಕೊಟ್ಟಷ್ಟ ತಗೊಂಡ ಮನೀಗಿ ಸಪ್ಪ ಮೋತಿ ಹಾಕ್ಕೊಂಡ ಬರತಾವು. ಇವೆಂತಾ ರೈತರೊ ಎಪ್ಪಾ? ನಿನ್ನ ಮಟದಾಗ ಕೊಡ್ರಿಸಿಕೊಂಡು ಒಂದೀಟ ಬುದ್ಧಿ ಹೇಳಬಾರದ? ಯಾಕೋ ಏನೋ ಮಲ್ಲಿಮಡು ಹ ೊಲಸ ನಾರತ್ಯೆತಿ, ಯಾಕಂತ ನೋಡ್ರೋ ಮಕ್ಕಳ್ರಾ ಅಂದರ ಮಿಗ ಸತ್ತಿರಬೇಕು ಬಿಡಬೇ ಅಂತಾರು. ಮಿಗ ಹೆಣ ಹೆಂಗ ನಾರತ್ಯೆತಿ? ವಿಷ ಹೆಂಗ ನಾರತ್ಯೆತಿ? ಅಟೂ ತಿಳಿಯಾಣಿಲ್ಲೇನೋ ನನ್ನಪ್ಪಾ?*" ಎಂದು ಹೇಳುವ ಮಾತುಗಳು ಶಿವಾಪುರದ ದುರಂತ ಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ. ಆಧುನೀಕತೆಯ ಕೆಡುಕಿನ ಫಲವಾದ ಇದು ನಮ್ಮ ಕೃಷಿ ಪರಿಸರವನ್ನು ವಿಷಕಾರಿಯನ್ನಾಗಿ ಮಾಡುತ್ತಿದೆ.

2000ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಹೂಗಳನ್ನು ಬಾಧಿಸುವ ಕೀಟಗಳ ನಾಶಕ್ಕೆ ಹೆಲಿಕಾಪ್ಟರ್ ಮೂಲಕ ಎಂಡೋಸಲ್ಫಾನ್ ಔಷಧಿಯನ್ನು ಸಿಂಪಡಿಸಲಾಯ್ತು. ಇದರ ಪರಿಣಾಮ ಸುತ್ತಲಿನ ವಾತಾವರಣ ಕಲುಷಿತಗೊಂಡಿತು. ಇದು ನಿಧಾನ ವಿಷವಾಗಿ ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಗೊಂಡು ಇಂದಿಗೂ ಇಲ್ಲಿ ಮಕ್ಕಳು ಅಂಗವೈಕಲ್ಯದಿಂದ ಜನಿಸುತ್ತಾರೆ. ರಾಜ್ಯದಲ್ಲಿ ಐದು ಸಾವಿರ ಎಂಡೋಸಲ್ಫಾನ್ ಸಂತ್ರಸ್ತರಿದ್ದಾರೆ. ಅದರಲ್ಲಿ ಮೂರು ಸಾವಿರ ಜನ ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದಾರೆ. ಸರಕಾರಗಳೂ ಏನೇ ಪರಿಹಾರ ನೀಡಿದ್ದರೂ ಅವರು ಕಳೆದುಕೊಂಡ ಆರೋಗ್ಯ, ಹದಗೆಟ್ಟ ಸಂಸಾರ, ಬದುಕನ್ನು ಸರಿಪಡಿಸಲಾಗಿಲ್ಲ. ಅನೇಕ ಸಲ ಜಾಗತೀಕರಣದ ಉರುಳಿಗೆ ಬಲಿಯಾಗುವುದು ಗ್ರಾಮೀಣ ಪ್ರದೇಶಗಳು ಅಥವಾ ರೈತರು. ಇತ್ತೀಚಿನ ವರ್ಷಗಳಲ್ಲಿ ಬಿ.ಟಿ. ಹತ್ತಿ, ಬಿ.ಟಿ. ಬದನೆಕಾಯಿ ಕೃಷಿಯ ಬಗ್ಗೆ ಸಾಕಷ್ಟು ಪರ ವಿರೋಧಗಳಾದವು. ಈ ಮೊದಲು ನಮ್ಮ ಹಿರಿಯ ತಲೆಮಾರಿನ ರೈತರ ಕಾಲದಲ್ಲಿ ಜವಾರಿ (ದೇಸಿ) ತಳಿಯ ಆಹಾರ ಬೆಳೆಗಳಿದ್ದವು. ಇವು ಅತ್ಯಂತ ಹೆಚ್ಚು ಪೌಷ್ಠಿಕಾಂಶಗಳನ್ನು ಹೊಂದಿದವುಗಳಾಗಿದ್ದವು. ಮನುಷ್ಯನ ಬದುಕು ಆಧುನೀಕರಣಗೊಂಡಂತೆ ಅದರ ಪ್ರಭಾವ ಕೃಷಿಯ ಮೇಲೂ ಆಯಿತು. ನಿಧಾನವಾಗಿ ದೇಸಿ ತಳಿಯ ಬೆಳೆಗಳು ಮಾಯವಾಗಿ ಹೈಬ್ರೀಡ್ ತಳಿಗಳು ಜನಪ್ರಿಯಗೊಂಡವು. ಇವು ದೇಸಿ ತಳಿಗಳಿಗೆ ಹೋಲಿಸಿದರೆ ಪೌಷ್ಠಿಕಾಂಶಗಳು ಕಡಿಮೆಯಿದ್ದರೂ ಇಳುವಳಿ ಹೆಚ್ಚಾಗಿ ನೀಡುತ್ತಿತ್ತು. ಇದು ರೈತ ಆರ್ಥಿಕವಾಗಿ ಸಬಲನಾಗಲು ಸಹಕಾರಿಯಾಯಿತು. ಹೀಗಾಗಿ ಹೈಬ್ರೀಡ್ ತಳಿಗಳು ಹೆಚ್ಚು ಜನಪ್ರಿಯವಾಗಿ ರೈತರು ಇದನ್ನೇ ಹೆಚ್ಚಾಗಿ ಬೆಳೆಯಲಾರಂಬಿಸಿದರು. ಆದರೆ ಹೈಬ್ರೀಡ್ ಬೆಳೆಗಳಿಗೆ ರೋಗಗಳು ಕಾಣಿಸಿಕೊಳ್ಳಲಾರಂಭಿಸಿದವು. ಇದನ್ನು ಹೋಗಲಾಡಿಸಲು ಕೀಟನಾಶಕ, ರಸಗೊಬ್ಬರಗಳ ಬಳಕೆ ಅಗತ್ಯವಾಯಿತು. ಹೀಗಾಗಿ ರೈತ ಕೃಷಿಯಲ್ಲಿ ರಸಗೊಬ್ಬರ, ಕೀಟನಾಶಕ ಇತ್ಯಾದಿ ಖರೀದಿಸುತ್ತಾ ಸಾಲಗಾರನಾಗಿ, ಕೃಷಿಯ ಲ್ಲಿ ದುಡಿದದ್ದು ಕೃಷಿಗೆ ಖರ್ಚು ಮಾಡಬೇಕಾದ ಪರಿಸ್ಥಿತಿ ಉಂಟಾಯಿತು. ಇದರಿಂದ ಹೈಬ್ರೀಡ್ ಬೀಜ, ರಸಗೊಬ್ಬರ, ಕ್ರಿಮಿನಾಶಕ ಕಂಪನಿಗಳಿಗೆ ಮಾತ್ರ ಲಾಭವಾಯಿತು ಅಷ್ಟೇ. ಇದು ಆಧುನೀಕರಣದ ಪರಿಣಾಮ. ವಿಜ್ಞಾನ ತಂತ್ರಜ್ಞಾನ

ಬೆಳೆದಂತೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬಿ.ಟಿ. ತಳಿಯ ಬೆಳೆಗಳು (ಕುಲಾಂತರಿ ತಳಿ) ಕಾಣಿಸಿಕೊಳ್ಳುತ್ತಿವೆ. ಇವುಗಳ ಹಿಂದಿರುವುದು ಬಹುರಾಷ್ಟ್ರೀಯ ಕಂಪನಿಗಳು. ಈ ಬಿ.ಟಿ. ತಳಿಯ ಆಹಾರ ಬೆಳೆಗಳು ಆರೋಗ್ಯಕ್ಕೆ ಅತ್ಯಂತ ಮಾರಕವಾಗಿವೆ.

'ಶಿವನ ಡಂಗುರ' ಕಾದಂಬರಿಯಲ್ಲಿ ವಿದೇಶಿ ಕಂಪನಿಯ ರಾಸಾಯನಿಕ ತ್ಯಾಜ್ಯದಿಂದ ಕೆಡುತ್ತಿರುವ ಶಿವಾಪುರವನ್ನು ಉಳಿಸಿಕೊಳ್ಳಲು ಬರಮೇಗೌಡನ ತಮ್ಮ ಈಸುರಗೌಡನ ಮಗ ಚಂಬಸವನ ನೇತೃತ್ವದಲ್ಲಿ ಪ್ರತಿರೋಧ ಆರಂಭವಾಗುತ್ತದೆ. ಈ ಪ್ರತಿರೋಧಕ್ಕೆ ಪ್ರತಿಯಾಗಿ ಪ್ರಭುತ್ವವು ಕೂಡಾ ಪ್ರತಿರೋಧವನ್ನು ಹತ್ತಿಕ್ಕುವ 180 ಪ್ರಯತ್ನ ನಡೆಯುತ್ತದೆ. ಶಿವಾಪುರಕ್ಕೆ ಜನತೆಯ ಪ್ರತಿಭಟನೆಯನ್ನು ಹತ್ತಿಕಲು ಬರುವ ಪೋಲೀಸರು ಚಂಬಸವನ ಮೇಲೆ ಹಲ್ಲೆ ನಡೆಸುತ್ತಾರೆ. ಪೋಲಿಸರ ಈ ಒರಟು ನಡೆಗೆ ದಂಗೆ ಎದ್ದ ಜನ ಪೋಲೀಸರ ಮೇಲೆ ದಾಳಿ ಮಾಡುತ್ತಾರೆ. ಪರಿಣಾಮ ಶಿವಾಪುರದಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಟಿಯಾಗುತ್ತದೆ. ಚಂಬಸನನ್ನು ಪೋಲೀಸರು ಬಂಧಿಸಿ ಕರೆದೊಯ್ಯುತ್ತಾರೆ. ತ್ಯಾಜ್ಯ ಸುರಿಯ ುವ ಲಾರಿಗಳು ಬರುವ ದಾರಿಯಲ್ಲಿ ಶಿವಾಪುರದ ಜನ ತಗ್ಗು ತೋಡಿ ರಸ್ತೆಯನ್ನೇ ಮುಚ್ಚಿ ಹಾಕುತ್ತಾರೆ. ಶಿವಾಪುರ ಜನರ ಪ್ರತಿರೋಧವನ್ನು ಹತ್ತಿಕ್ಕಲು ಪೋಲೀಸರು ಇಡೀ ರಾತ್ರಿ ಶಿವಾಪುರದಲ್ಲಿ ಉಳಿದುಕೊಳ್ಳುತ್ತಾರೆ. ಚಂಬಸ ಜೈಲಿನಲ್ಲಿದ್ದಾಗ ಅವನ ಹೆಂಡತಿ ಶಾರವ್ವಳ ಮೇಲೆ ಪೋಲೀಸರು ಸಾಮೂಹಿಕ ಅತ್ಯಾಚಾರವೆಸಗುತ್ತಾರೆ. ಇಲ್ಲಿ ರಕ್ಷಕರೇ ಭಕ್ಷಕರಾಗುತ್ತಾರೆ. ಜೈಲಿನಿಂದ ಬಿಡುಗಡೆಗೊಂಡ ಚಂಬಸವ ತನ್ನ ಹೆಂಡತಿಯನ್ನು ಅತ್ಯಾಚಾರ ಮಾಡಿದ ಪೋಲಿಸರು ಹಾಗೂ ಶಿವಾಪುರದ ದುರಂತಕ್ಕೆ ಕಾರಣವಾದ ರಾಡಿ ರಮೇಶ, ಕೇಡಿ ಗಣಪನ್ನು ಕೊಲ್ಲುವುದರ ಮೂಲಕ ಶಿವಾಪುರದಲ್ಲಿ ರಕ್ತಪಾತವಾಗುತ್ತದೆ. ಶಿವಾಪುರದ ದುರಂತಕ್ಕೆ ಕುಂಟಿರಪ ನೇರ ಕಾರಣವಾಗಿದ್ದರೂ ಬರಮೇಗೌಡನ ಸ್ತ್ರೀ ಲೋಲುಪತೆಯೂ ಕಾರಣವಾಗಿದೆ. ತಾರಾಳ ಮೋಹದಲ್ಲಿ ಮೈಮರೆಯುವ ಅವನಿಗೆ ತನ್ನ ಶಿವಾಪುರ ದುರಂತದ ಅಂಚಿಗೆ ಸಾಗುತ್ತಿರುವುದನ್ನು ಗಮನಿಸಲಾರದಷ್ಟು ಕುರುಡನಾಗುತ್ತಾನೆ. ಹುಟ್ಟಿ ಬೆಳೆದ ಊರನ್ನೇ ಹಾಳು ಮಾಡುವ ರಾಡಿ ರಮೇಶ, ಕೇಡಿ ಗಣಪ ದುಷ್ಟಶಕ್ತಿಯಾದ ಕುಂಟಿರಪ ಹಾಗೂ ಜಾಕ್ಸನ್ ಕಂಪನಿಯೊಂದಿಗೆ ಕೈ ಜೋಡಿಸುವುದು ಶಿವಾಪುರ ಹಾಳಾಗಲು ಕಾರಣವಾಗುತ್ತದೆ. ಯುದ್ಧದ ನಂತರ ಶಾಂತಿ ನೆಲೆಸುವಂತೆ ಶಿವಾಪುರದಲ್ಲಿ ರಕ್ತಪಾತವಾದ ನಂತರ ಹಲವಾರು ಬದಲಾವಣೆಗಳಾಗಿ ಮೊದಲಿನ ಸ್ವರೂಪಕ್ಕೆ ಮರಳುತ್ತದೆ. ಬಾಗೀರ್ತಿ ಮಗಳು ಮಾದೇವಿಗಾಗಿ ಭ್ರಷ್ಟಾಚಾರ, ಕೊಲೆ, ಸುಲಿಗೆ ಇಲ್ಲದಂತ ಶಿವಾಪುರ ಕಟ್ಟಿ, ಆ ಬದುಕಲ್ಲಿ ಅವಳು ಬದುಕಿ ನಿಮ್ಮನ್ನು ಬದುಕಿಸುತ್ತಾಳೆ ಎಂದು ಚಂಬಸನಿಗೆ ನಮಶ್ಶಿವಾಯ ಹೇಳುವ ಮಾತುಗಳು ಕಾದಂಬರಿಯ ಆಶಯವೂ ಆಗಿದೆ.